## ಗುಂಡನ ಜೇಬಿಗೆ ಕತ್ತರಿ

**ಸರ್ಕಲ್ ಇನ್‌ಸ್ಪೆಕ್ಟರ್:** 'ಅಪರಾಧ ತಡೆ ಆಚರಣಾ ದಿನ' ಕಾರ್ಯಕ್ರಮಕ್ಕೆ ನೀವೇ ಮುಖ್ಯ ಭಾಷಣಕಾರರು. ಹೀಗಿರುವಾಗ ನೀವೇ ಇಷ್ಟು ತಡವಾಗಿ ಬಂದರೆ ಹೇಗೆ? ಬರುವಾಗ ದಾರಿಯಲ್ಲಿ ಏನಾದ್ರೂ ತೊಂದ್ರೆ ಆಯ್ತಾ?

**ಗುಂಡ:** ಯಾಕ್ ಕೇಳ್ತಿರಾ ನನ್ ಕಥೆನಾ. ಕಾರ್ಯಕ್ರಮಕ್ಕೆ ಬೇಗ ಬರಬೇಕೆಂದು ಸಿಟಿ ಬಸ್ ಹತ್ತಿದೆ. ಬಸ್‌ನಲ್ಲಿ ಯಾರೋ ಕಳ್ಳರು ಪಿಕ್ ಪಾಕೆಟ್ ಮಾಡಿ ನನ್ನ ಜೇಬಿಗೆ ಕತ್ತರಿ ಹಾಕಿಬಿಟ್ರು ಸ್ವಾಮಿ! ಸಮೀಪದ ಪೊಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಟ್ಟು ಬಂದೆ!

***

## ಮಳೆಗೂ ಟ್ರಾಫಿಕ್ ಜಾಮ್!

**ಸುಬ್ಬ:** ಗುಂಡ... ಮಾರತ್ತಹಳ್ಳಿ ಕಡೆ ಜೋರಾಗಿ ಮಳೆ ಬೀಳ್ತಿದೆಯಂತೆ. ಆದ್ರೆ ನಮ್ಮ ಬಿ.ಟಿ.ಎಂ. ಲೇಔಟ್‌ನಲ್ಲಿ ಮಳೆಯ ಸುಳಿವೇ ಇಲ್ವಲ್ಲೋ?

**ಗುಂಡ:** ಓಹ್... ಅಷ್ಟೇನಾ. ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ಸಖತ್ ಟ್ರಾಫಿಕ್ ಜಾಮ್ ಇದೆಯಂತೆ. ಬಹುಶಃ ಮಳೆಯೂ ಅದ್ರಲ್ಲಿ ಸಿಲುಕಿರಬೇಕು. ಸ್ವಲ್ಪ ತಡಿ. ಟ್ರಾಫಿಕ್ ಜಾಮ್ ಕ್ಲಿಯರ್ ಆದ ಮೇಲೆ ನಿಮ್ ಕಡೆನೂ ಬರುತ್ತೆ.

***




ಲಂಚ ತಿನ್ನಬೇಡ್ರೀ... ತಿಂದ್ರೆ ಜೈಲಲ್ಲಿ ಮುದ್ದೆ ತಿನ್ನಬೇಕಾಗುತ್ತದೆ!

## ಕುಮಾರ ವ್ಯಾಸ, ಅಲ್ಲ ಕುಮಾರಸ್ವಾಮಿ!

**ಮೇಷ್ಟ್ರು:** ಭಲೇ ಕಣಯ್ಯಾ, 'ಕುಮಾರ ವ್ಯಾಸನ ಬಗ್ಗೆ ಒಂದು ಪುಟ ಪ್ರಬಂಧ ಬರೆದುಕೊಂಡು ಬಾ' ಅಂದ್ರೆ ಇಪ್ಪತ್ತೈದು ಪುಟ ಬರೆದುಕೊಂಡು ಬಂದಿದ್ದೀಯ. ನಿಜಕ್ಕೂ ನಿನಗೆ ಒಳ್ಳೆಯ ಭವಿಷ್ಯ ಇದೆ.

**ಮರಿ ಗುಂಡ:** ಅಯ್ಯೋ... ಸರ್, ನೀವ್ ಸರಿಯಾಗಿ ಓದಿ. ನಾನು ಬರೆದಿರುವುದು ಕುಮಾರ ವ್ಯಾಸನ ಬಗ್ಗೆ ಅಲ್ಲ, ಕುಮಾರಸ್ವಾಮಿಯ ಬಗ್ಗೆ!

***

## ಉಳಿತಾಯದ ಗುಟ್ಟು!

**ಗುಂಡ:** ಬೆಳಿಗ್ಗೆ ಬೇಗ ಏಳುವುದರಿಂದ ತಿಂಗಳಿಗೆ ಇನ್ನೂರು ರೂಪಾಯಿ ಉಳಿಸಬಹುದು.

**ಸುಬ್ಬ:** ಹೇಗಪ್ಪ?

**ಗುಂಡ:** ವೆರಿ ಸಿಂಪಲ್... ಬೇಗ ಎದ್ದರೆ ಎದುರು ಮನೆ ಗೇಟ್‌ಗೆ ಸಿಲುಕಿಸಿದ ನ್ಯೂಸ್ ಪೇಪರ್ ಓದಿ ಮುಗಿಸಿ, ಮತ್ತೆ ಅದನ್ನು ಅಲ್ಲೇ ಇಟ್ಟು ಬಾ. ಅದ್ರಿಂದ ನೀನು ನಿನ್ನ ಮನೆಗೆ ಪೇಪರ್ ಹಾಕಿಸಿಕೊಳ್ಳುವುದೇ ಬೇಕಿಲ್ಲ.

**ಸುಬ್ಬ:** ಸುಮ್ನಿರಪ್ಪ. ನ್ಯೂಸ್ ಪೇಪರ್ ಬರೋದೆ ಎಂಟು ಗಂಟೆ ಮೇಲೆ. ಇನ್ನೂ ಬೇಗ ಎದ್ದರೆ, 'ಪಕ್ಕದ ಮನೆಯ ಹುಡುಗಿ ರಂಗೋಲಿ ಹಾಕೋದನ್ನ ನೋಡೋಕೆ ಬೇಗ ಎದ್ದಿದ್ದೀರಿ' ಅಂತ ನನ್ನ ಹೆಂಡತಿ ಅಪಾರ್ಥ ಮಾಡ್ಕೊತಾಳೆ!

***

## ಸುಬ್ಬಿ ಕೆನ್ನೆಗೆ ಬಿತ್ತು ಏಟು

**ಸುಬ್ಬಿ:** ಸರ್ ಬೈಕ್‌ನಲ್ಲಿ ಬಂದ ಇಬ್ಬರು ಕಳ್ಳರು ನನ್ನ ಕೆನ್ನೆಗೆ ಹೊಡೆದು ಹಲ್ಲೆ ಮಾಡಿದ್ದಾರೆ.

**ಪೊಲೀಸ್:** ಹಲ್ಲೆಗೆ ಕಾರಣ ಏನು?

**ಸುಬ್ಬಿ:** ನಿನ್ನೆ ಬೆಳಿಗ್ಗೆ ಮನೆಯ ಮುಂದೆ ರಂಗೋಲಿ ಹಾಕುವಾಗ ಕತ್ತಲ್ಲಿದ್ದ ನನ್ನ ಸರವನ್ನು ಕಿತ್ತುಕೊಂಡು ಹೋಗಿದ್ದರು. ಇವತ್ತು ಬೆಳಿಗ್ಗೆ ವಾಪಸ್ ಬಂದ ಅವರು ನನ್ನ ಕೆನ್ನೆಗೆ ಹೊಡೆದು ಸರವನ್ನು ನನ್ನ ಮುಖದ ಮೇಲೆ ಬಿಸಾಡಿ ಹೋಗಿದ್ರು.

**ಪೊಲೀಸ್:** ವಾಪಸ್ ಕೊಟ್ರಾ... ಹಾಗಾದ್ರೆ ಅವ್ರು ತುಂಬ ಒಳ್ಳೆಯ ಕಳ್ಳರು ಇರಬೇಕು ನೋಡಮ್ಮ.

**ಸುಬ್ಬಿ:** ಅದು ಹಾಗಲ್ಲ ಸರ್. ಅವರು ಕಿತ್ತುಕೊಂಡು ಹೋಗಿದ್ದ ಸರ ಚಿನ್ನದ್ದಲ್ಲ, ನಕಲಿ.

***

## ಗಂಡನ ತಾಳ್ಮೆ

**ಡಾಕ್ಟರ್:** ಐ ಆ್ಯಮ್ ಸೋ ಸಾರಿ ಸರ್. ನಿಮ್ಮ ಹೆಂಡತಿಯ ಕಾಯಿಲೆಯನ್ನು ಗುಣ ಪಡಿಸೋಕೆ ತುಂಬ ಪ್ರಯತ್ನಪಟ್ಟೆ. ಆದ್ರೆ ಪರಿಸ್ಥಿತಿ ತೀರಾ ಕೈ ಮೀರಿ ಹೋಗಿದೆ. ಹಾಗಾಗಿ ನಿಮ್ಮ ಮನೆಯವ್ರು ಹೆಚ್ಚೆಂದರೆ ಇಪ್ಪತ್ತು ನಿಮಿಷ ಬದುಕಿರ್ತಾರೆ ಅಷ್ಟೇ.

**ಸುಬ್ಬ:** ಅಯ್ಯೋ... ಬಿಡಿ ಡಾಕ್ಟರ್. ನೀವ್ ಯಾಕ್ ಸಾರಿ ಕೇಳ್ತೀರಿ? ಮೂವತ್ತು ವರ್ಷ ಅವಳನ್ನು ಸಹಿಸಿಕೊಂಡೇ ಜೀವನ ಸಾಗಿಸ್ತಿದ್ದೀನಿ. ಅಂಥದ್ರಲ್ಲಿ ಇಪ್ಪತ್ತು ನಿಮಿಷ ಸಹಿಸಿಕೊಳ್ಳಲಾರೆನಾ?

***

## ಗಂಡನ ತೀರ್ಥಯಾತ್ರೆ

**ಕಮ್ಲಿ:** ನಿಮ್ ಯಜಮಾನರು ಎಲ್ಲಿ, ಕಾಣ್ತಿಲ್ಲ?

**ಸುಬ್ಬಿ:** ಅವ್ರಾ... ತೀರ್ಥಯಾತ್ರೆಗೆ ಹೋಗಿದ್ದಾರೆ.

**ಕಮ್ಲಿ:** ಎರಡ್ ಅವರ್ ಹಿಂದೆ ಮನೆಯಲ್ಲಿ ಇದ್ದದ್ದನ್ನ ನಾನೇ ನೋಡ್ದೆ. ಅದ್ಯಾವಾಗ ಹೋದ್ರು?

**ಸುಬ್ಬಿ:** ಅದಾ... ಸಂಜೆ ಆರು ಗಂಟೆಗೆ ಹೋದ್ರು.

**ಕಮ್ಲಿ:** ಮತ್ ಯಾವಾಗ ಬರ್ತಾರೆ?

**ಸುಬ್ಬಿ:** ರಾತ್ರಿ ಹನ್ನೊಂದು ಗಂಟೆಗೆ ಬರ್ತಾರೆ!

***

## ಸುಬ್ಬಿಯ ಮೊಬೈಲ್ ಹುಡುಕಾಟ

**ನರ್ಸ್:** ಮೇಡಂ, ನಿಮಗೆ ಗಂಡು ಮಗು ಹುಟ್ಟಿದೆ. ಕಂಗ್ರಾಟ್ಸ್!

**ಸುಬ್ಬಿ:** ಥ್ಯಾಂಕ್ಸ್. (ಕೂಡಲೇ ಏನೋ ನೆನಪಾದಂತೆ ಗಾಬರಿಯಿಂದ ಹಾಸಿಗೆಯ ಮೇಲೆ ಕೈಯಾಡಿಸಿ, ತಡವುತ್ತ ಏನನ್ನೋ ಹುಡುಕಾಡಿದಳು)

**ನರ್ಸ್:** ಮೇಡಂ, ಮಗು ಹುಡುಕುತ್ತಿದ್ದೀರಾ?

**ಸುಬ್ಬಿ:** ಇಲ್ಲ ಇಲ್ಲ... ದಿಂಬಿನ ಕೆಳಗೆ ಮೊಬೈಲ್ ಇಟ್ಟಿದ್ದೆ, ಅದು ಕಾಣ್ತಾ ಇಲ್ಲ!

***




ವರ್ಗಾವಣೆ ಸಿಕ್ಕಿಲ್ಲ ಅಂತ ಯಾಕೆ ತಲೆ ಬಿಸಿ? ಲಂಚ ತೆಗೆದುಕೊಳ್ಳುವುದು ನಿಲ್ಲಿಸಿ, ಪ್ರಾಮಾಣಿಕವಾಗಿ ಇದ್ಬಿಡು. ಎತ್ತಂಗಡಿ ಮಾಡ್ತಾರೆ.

## ಕಂಡಕ್ಟರ್‌ನ ಕಷ್ಟ

**ಕಂಡಕ್ಟರ್:** ಎಂಥ ಕೆಲಸ ಮಾಡಿಬಿಟ್ರಿ. ದಿನವೂ 'ಪಾಸ್' ಅನ್ನುತ್ತಿದ್ದವರು ಇವತ್ತು ಯಾಕೆ ಸ್ಕ್ವಾಡ್‌ನವರು ಚೆಕ್ ಮಾಡುವಾಗ ಸುಮ್ನೆ ಇದ್ರಿ. ನನ್ ಕರ್ಮ. ಈಗ ನೋಡಿ ನೀವ್ ಮಾಡಿದ ತಪ್ಪಿಗೆ ಇಬ್ಬರಿಗೂ ದಂಡ ಹಾಕಿದ್ರು.

**ಗುಂಡ:** ಯಾಕ್ ಕಿರುಚಾಡುತ್ತೀರಿ ಸರ್. ಸ್ವಲ್ಪ ಹೊತ್ತು ಸುಮ್ಮನೇ ಇರಿ. ನನ್ ಕಷ್ಟ ನನಗೆ!

**ಕಂಡಕ್ಟರ್:** ಏನು ಅಂಥದ್ದು ನಿಮ್ಮ ಕಷ್ಟ?

**ಗುಂಡ:** ನನ್ ಹತ್ರ ಪಾಸ್ ಇದ್ರೆ ತಾನೇ ಅವರಿಗೆ ತೋರಿಸೋಕೆ! ನಿಮ್ಗೂ ದಿನವೂ ಸುಮ್ಮನೆ ಪಾಸ್ ಅಂತ ಹೇಳ್ತಿದ್ದೆ. ನೀವೂ ಚೆಕ್ ಮಾಡ್ತಿರಲಿಲ್ಲ.

**ಕಂಡಕ್ಟರ್:** ಅಯ್ಯೋ ಪೆದ್ ಮುಂಡೆದೆ. ಸ್ಕ್ವಾಡ್‌ನವರೂ ಕೇಳಿದಾಗಲೂ 'ಪಾಸ್' ಅಂದಿದ್ರೆ ಅವ್ರೂ ಸುಮ್ನೆ ಹೋಗ್ತಾ ಇದ್ರಲ್ಲ!

ಸಂಗ್ರಹ:
**ಆರ್. ವೀರೇಶ್ ಕುಮಾರ್, ಬೆಂಗಳೂರು**